# ಬಸುರು ಅಂದರೆ..

■ ಜಿ. ತಿಪ್ಪೇಸ್ವಾಮಿ, ತಿಪಟೂರು

ಅಗಸರ ನಾಗ, ಮಡ್ಡೇರ ರತ್ನಿ, ನೆವ್ವಾರ ಸರೋಜಿ, ಕುಂಬಾರರ ಚಿದ, ಕುಲುಮೆ ಖಲೀಲ ಮತ್ತು ಊರಗೊಲ್ಲರ ಹುಡುಗ ನಾನು. ನಮ್ಮದು ಒಂದು ಇಂಟಿಗ್ರೇಟೆಡ್ ಗುಂಪು. ಹೆಚ್ಚು ಕಡಿಮೆ ಈ ಗುಂಪಿನ ನಾಯಕ ನಾನೇ ಆಗಿದ್ದೆ. ಯಾವ ದಾಳಿಯೂ ನನ್ನ ಉಸ್ತುವಾರಿಕೆಯಲ್ಲೇ ನಡೆಯುತ್ತಿತ್ತು. ಆದರೂ ಅವರ ಸಲಹೆ, ಉಪಾಯಗಳಿಗೆ ಸದಾ ಅವಕಾಶವಿರುತ್ತಿತ್ತು. ನೆತ್ತಿಯಲ್ಲಿ ಬುದ್ಧಿಯಿದ್ದಷ್ಟೇ ಕೈ ಕಾಲು ದೇಹ. ಆದರೂ ಮಡ್ಡೇರ ರತ್ನಿ ಮಾತ್ರ ಕಿರುಬನ ತರ ನುಗ್ಗುತ್ತಿದ್ದಳು. ರತ್ನಿ ಮತ್ತು ಸರೋಜಿಯ ಡ್ರೆಸ್ಸೆಂದರೆ ಒಂದು ಕಿತ್ತು ಹೋದ ಹೂವಿರುವ ಲಂಗ, ಒಂದು ತ್ಯಾಪೆ ಜಾಕೀಟು. ನಮಗೆ ಕುಂಡಿ ಹತ್ತಿರ ಕಿತ್ತೋಗಿರುವ ನಿಕ್ಕರು, ಮಾವಿನ ಹಣ್ಣಿನರಸದ, ಸಿಂಬಳದ.. ಇನ್ನೂ ಏನೇನು ಸಾಧ್ಯವಿತ್ತೋ ಅವೆಲ್ಲ ದ್ರಾವಣಗಳ ಮಿಶ್ರಣಗಳನ್ನು ಅಡಗಿಸಿಕೊಂಡಿದ್ದ ಬಟ್ಟೆಯೇ ನಮ್ಮ ಅಂಗಿ. ನಮ್ಮ ಆರೂ ಜನರ ಕುಟುಂಬದ ಸ್ಥಿತಿಗತಿಗಳು ಒಂದೇ. ('ಕೂಲಿ ಪೋತೆ ಕುಂಡಗಾಲೆ, ಲೇಕ ಪೋತೆ ಗುದ್ದ ಕಾಲೆ') ಕೂಲಿ ಹೋದರೆ ಮಡಕಿ ಸುಡುತ್ತೆ, ಇಲ್ಲ ಅಂದರೆ ಮುಕುಳಿ ಸುಡುತ್ತೆ ಎನ್ನುವ ಪರಮ ಆರ್ಥಿಕ (ಪಾರಮಾರ್ಥಿಕ) ಸ್ಥಿತಿ ನಮ್ಮದು.

ಉಮಾದೇವಿ ನಮ್ಮ ಕ್ಲಾಸ್‌ಮೇಟ್. ನಮ್ಮ ಎಲ್ಲಾ ಕ್ಲಾಸ್‌ಮೇಟ್‌ಗಳನ್ನು ನಾವು ಪ್ರೀತಿಯ ಹೆಸರಿಂದೇ ಕರೆಯುತ್ತಿದ್ದೆವು. ಹಾಗೆಯೇ ಒಮ್ಮೆ ಅವಳ ಮನೆಯ ಮುಂದೆ ನಿಂತು ಅವಳನ್ನು ಸ್ಕೂಲಿಗೆ ಕರೆದುಕೊಂಡು ಹೋಗುವುದಕ್ಕೆಂದು ಉಮ್ಮೀ... ಎಂದು ಕೂಗಿದೆ. ತಕ್ಷಣವೇ ಅವಳ ಅಮ್ಮ ಈದ ನಾಯಿ ಥರ ಹೊರಗೆ ಬಂದು, 'ಲೇ ಬಾರೋ ಇಲ್ಲಿ' ಅಂದಳು. ಹತ್ತಿರ ಹೋಗಿ ನಿಂತೆ. 'ಹಿಂದಕ್ಕೆ ತಿರುಗೋ...' ತಿರುಗಿದೆ. 'ಮುಕುಳಿ ಮುಚ್ಚಿಕೊಳ್ಳೋಕೆ ಸರಿಯಾದ ಒಂದು ನಿಕ್ಕರ್ ಇಲ್ಲ ನಿನಗೆ; ನಿಮ್ಮನೇಲಿ ಇವೊತ್ತು ರಾತ್ರಿಗೆ ಮುದ್ದೆ ಇದ್ರೆ ಸಾರಿಲ್ಲ, ಸಾರಿದ್ರೆ ಮುದ್ದೆಯಿಲ್ಲ. ಸಾಬರ ತರ ದೌಲತ್ತಿರಬೇಕಾದ್ದೆ ಕಣೋ. ಲೇ ಬೇವಾರ್ಸಿ ನನಮಗನೆ, ನನ್ನ ಮಗಳ ಎಡಗಾಲಿನ ಬಣ್ಣಕ್ಕೆ ನಿನ್ನೆಲ್ಲಾ ಕುಟ್ಟಿಹಾಕಿದ್ರೂ ಸಮ ಆಗಲ್ಲ. ನನ್ನ ಮಗಳನ್ನ ಉಮ್ಮಿ ಅಂತೀಯ, ಲೌಡಿ ಮಗನೆ ಇನ್‌ಮ್ಯಾಲೆ ನನ್ ಮಗಳನ್ನ ಉಮ್ಮಕ್ಕ ಅನಬೇಕು ಗೊತ್ತಾಯ್ತ' ಅಂತ ಅಪ್ಪಣೆ ಕೊಡಿಸಿದರು. ಆಕೆ ಹೇಳಿದ್ದೆಲ್ಲಾ ಸರಿಯಾಗೇ ಇತ್ತು. ಅದು ನನಗೆ ಅವಮಾನ ಅಂತ ಅನಿಸಲೇ ಇಲ್ಲ. ಆದರೆ ಉಮ್ಮಿ 'ಅಯ್ಯ ಬಿಡಮ್ಮ, ಅದಕ್ಯಾಕ್ ಅಷ್ಟ್ ಬೈತೀಯ' ಅಂದಾಗ ಮಾತ್ರ ನನಗೆ ಗೊತ್ತಿಲ್ಲದೆ ಥಟ್ ಅಂತ ಕಣ್ಣೀರು ಉದುರಿತ್ತು.

ಆ ಅಂಥ ಉಮ್ಮಕ್ಕನ ಅಣ್ಣ ಮಾಧವಣ್ಣ. ಅವೊತ್ತು ಅವನ ಪಂಚಾಯ್ತಿ. ಊರ ಮುಂದಲ ಸುಂಕಲಮ್ಮನ ಗುಡಿಯೇ ಪಂಚಾಯ್ತಿ ಕಟ್ಟೆ. ದೂರು ಕೊಟ್ಟವರು, ಆರೋಪಿಗಳೆಂಬುವವರು ಈ ಎರಡೂ ಕಡೆಯ ಸಂಬಂಧಿಕರು, ಕುತೂಹಲಿಗಳು ಪಂಚಾಯ್ತಿ ಮಾಡುವ ಗಣ್ಯರು –ಹೀಗೆ ಜನರ ಹಿಂಡೇ ಜಮಾಯಿಸಿ ರುತ್ತಿತ್ತು. ಸಾಮಾನ್ಯವಾಗಿ ಅದು ಸಾಯಂಕಾಲದ ಹೊತ್ತೇ ಆಗಿರುತ್ತಿತ್ತು. ಜನಗಳ ಸಂಧಿಗಳಲ್ಲಿ ಜಾಗ ಮಾಡಿಕೊಂಡ ನಮ್ಮ ಗುಂಪು ಅಲ್ಲಲ್ಲಿ ಚದುರಿದಂತೆ ಇರುತ್ತಿತ್ತು. ಕೆಲವೊಮ್ಮೆ ಆರೋಪ ಸಾಬೀತಾದವರು ಹೊಟ್ಟೆಗಿಲ್ಲದ ಕೂಲಿಯಾಳು ಮತ್ತು ಕೆಳಜಾತಿಯವರಾಗಿದ್ದರೆ ಕಂಬಕ್ಕೆ ಕಟ್ಟಿ ಬಾರುಕೋಲಿನಿಂದ ಹೊಡೆಯುತ್ತಿದ್ದರು. ಹೆಂಗಸರಾದರೆ, ಲೇ ಮುಂಡೆ ಸೀರೆ ಬಿಚ್ಚಿ ಹೊಡಸ್ತೀನಿ ಅನ್ನುತ್ತಿದ್ದರು.

ಮಾಧವಣ್ಣನ ಪಂಚಾಯ್ತಿ ಶುರುವಾಯ್ತು. ವಿಷಯ: ಮಡ್ಡೇರ ಸತ್ಯೆಪ್ಪನ ಎರಡನೇ ಹೆಂಡತಿಯಾದ ತಿಪ್ಪಿಯನ್ನು ಮಾಧವಣ್ಣ ಬಸರು ಮಾಡಿದ್ದಾನೆ. ಅದಕ್ಕಾಗಿ ಸತ್ಯೆಪ್ಪ ನ್ಯಾಯ ಕೇಳುತ್ತಿದ್ದಾನೆ.

ಅಲ್ಲಿಯವರೆಗೆ ನಡೆದ ಪಂಚಾಯ್ತಿಗಳಲ್ಲಿ ಇಂಥ ವಿಷಯ ಬಂದಿರಲಿಲ್ಲ. ಅಥವಾ ನಮಗೆ ಗೊತ್ತಿಲ್ಲ. ಬಸುರೆಂದರೇನೋ ಅಥವ ಬಸುರು ಮಾಡಲು ಏನೇನು ಮಾಡುತ್ತಾರೆಂಬುದು ನನಗಾದಿಯಾಗಿ ನಮ್ಮ ಗುಂಪಿಗೇನು ಗೊತ್ತು?! ಪಿಳಿ ಪಿಳಿ ಕಣ್ಣು ಬಿಟ್ಟು ನೋಡುತ್ತಿದ್ದೆವು.

ಸೇರಿದ ಜನಗಳಲ್ಲಿ ಗುಸು ಗುಸು, ಅಸ್ಪಷ್ಟ ಅನುಮಾನಗಳು, ಉತ್ತರಗಳು. ಯಾವಾಗಂತೆ... ಎಲ್ಲಂತೆ... ಅಲಲಾ... ಬಸರಾಗಬೇಕಾದ್ರೆ ಚೆನ್ನಾಗಿತ್ತು. ಈಗ? ಅಯ್ಯೋ ಬಿಡು ಹೆಂಗಿದ್ರೂ ಆ ಮುದಿ ಸತ್ಯೆಪ್ಪನಿಗೆ ಮಕ್ಕಳಿಲ್ಲ. ಅದೇ ಕಣಕ್ಕ ವಯಸ್ಸು ಹೋದಮ್ಯಾಲೆ ಮದ್ವೆ ಮಾಡ್ಕಬಾರ್ದು... ಮಾಡ್ಕಂಡ್ರೆ... ನೋಡು ಹಿಂಗೆ. ಕಂಡೋರ ಪಾಲು. –ಹೀಗೆ ಅವರವರ ಯೋಗ್ಯತಾನುಸಾರವಾಗಿ ಮಾತುಗಳನ್ನಾಡಿ ಬಾಯಿ ಬೆಚ್ಚಗೆ ಮಾಡಿ ಕೊಳ್ಳುತ್ತಿದ್ದರು. ಅಲ್ಲಿ ಮೌನವಾಗಿದ್ದವರೆಂದರೆ, ಮುಖ ಮುಚ್ಚಿಕೊಳ್ಳುವಂತೆ ಸೆರಗು ಹಾಕಿದ್ದ ಮಡ್ಡೇರ ತಿಪ್ಪಿ, ಗುಡಾಣದಂಥ ಹೊಟ್ಟೆಯನ್ನು ಹೊತ್ತು ನಿಂತಿದ್ದ ಸತ್ಯೆಪ್ಪ ಮತ್ತು ಕಂಬಕ್ಕೊರಗಿ ನಿಂತಿದ್ದ ಮಾಧವಣ್ಣ.

ನಮ್ಮ ಗುಂಪಿಗೆ ಈ ಪಂಚಾಯಿತಿ ಸಪ್ಪೆಯೆನಿಸಿತು. ಕಣ್‌ಸನ್ನೆಯಿಂದಲೇ ಮಾತನಾಡಿಕೊಂಡು ಗುಂಪಿನಿಂದ ಹೊರಬಿದ್ದೆವು. ನಮಗೆ ಅದರ ತಳ ಬುಡ ಗೊತ್ತಾಗಿರಲಿಲ್ಲ. ಆದರೂ ಕುತೂಹಲ ಹಾಗೇ ಇತ್ತು.

ಎಲ್ಲರೂ ಮಾತನಾಡುವುದನ್ನು ನಿಲ್ಲಿಸಿ ನಿಶ್ಯಬ್ಧವಾಯಿತು. ನಾವು ಮತ್ತೆ ಹೋಗಿ ಸೇರಿಕೊಂಡೆವು. ಪಂಚಾಯಿತಿ ಮುಗಿದಿತ್ತು.

ಮಾರನೆಯ ದಿನ ಮಾಧವಣ್ಣ ದನ ಬಿಟ್ಕಂಡು ಹೊಲಕ್ಕೆ ಹೊರಟಿದ್ದ. ನಾವೂ ಅವನನ್ನ ಸೇರ್ಕಂಡ್ವಿ.

ಏನೋ ಸ್ಕೂಲಿಗೆ ಹೊರಟ್ರೇನ್ರೋ.

ಹೂಂ ಕಣಣ್ಣ.

ಮಾಧವಣ್ಣ, ನಿನ್ನೆ ಪಂಚಾತೀಲಿ ನಿನ್ನ ಯಾಕ್ ಹೊಡೀಲಿಲ್ಲ.

ಯಾಕ್ ಹೊಡೀತಾರೋ.

ಮತ್ತೆ ಅದೇನೋ ನೀನು ಬಸ್ರು ಮಾಡಿದ್ದೆ ಅಂತ ಅಂದ್ರು.

ಬಸ್ರು ಮಾಡೋದು ಅಂದ್ರೆ ಏನಣ್ಣ.

ಥುತ್ ತೇರಿ ಬೇವರ್ಸಿ ನನ್‌ಮಗನೇ. ಹುಟ್ಟಲಿಲ್ಲ ಬೆಳೀಲಿಲ್ಲ ಆಗ್ಲೇ ಇವನಿಗೆ ಬಸ್ರು ಮಾಡೋ ಚಿಂತೆ...

ನೋಡ್ರೋ ಒಂದ್ ಕೆಲ್ಸ ಮಾಡ್ರಿ. ನಮ್ಮೂರಿಗೆ ಬಿಳಿ ಸೀರೆ ಉಟ್ಕಂಡು ನರ್ಸ್ ಬರ್ತಾಳಲ್ಲ. ಆಕೇನ ಕೇಳ್ರಿ ಅಂದು ನಮ್ಮ ಕಡೆ ನೋಡಿ ನಗಾಡ್ತಿದ್ದ.

ಮಾಧವಣ್ಣ ನರ್ಸ್ ಅಂತ ಹೇಳಿದ್ದರಿಂದ ನಾವು. ಓಹೋ... ಬಸ್ರು ಅಂದ್ರೆ ಯಾವ್ದೋ ರೋಗ ಇರಬೇಕು ಅಂತ ಅಂದುಕೊಂಡ್ವು.



ಇಲಸ್ಟ್ರೇಷನ್: ಎಸ್. ವಿಷ್ಣುಕುಮಾರ್